**ಸಾಕ್ಷಿಗೆ ದಿನಾಂಕಃ 25.10.2025 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ. ಎಂ.ಎಂ. ವಕೀಲರಿಂದಃ**

ನಿ.ಪಿ.2 ರಲ್ಲಿ ನಮೂದು ಮಾಡಿರುವ ಉಮೇಶ ಮತ್ತು ಎಸ್.ಸಿದ್ದಪ್ಪ ನವರು ಯಾಕನೂರು ಗ್ರಾಮದವರು. ಅವರುಗಳು ನನಗೆ 11 ವರ್ಷಗಳಿಂದ ಪರಿಚಯ ಇರುತ್ತಾರೆ. 4 ಮತ್ತು 5 ನೇ ಪ್ರತಿವಾದಿಗಳು ನಮ್ಮ ಪಕ್ಕದ ಜಮೀನಿನವರು. ಸದರಿಯವರು ವಾಸ ಮಾಡುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ಅವರುಗಳ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲತಃ ವಾದಿಯವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಖರೀದಿ ಮಾಡುವ ಸಂದರ್ಭದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ record of rights and index of land ಗಳನ್ನು ನೋಡಿರುತ್ತೇನೆ. ಅವುಗಳನ್ನು 2011 ರಲ್ಲಿ ನೋಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಈ ದಾವೆಯ ವಾದಿಯ ಹೆಸರು ನಮೂದು ಇತ್ತು ಎಂದರೆ ಸರಿಯಲ್ಲ. ಸಾಕ್ಷಿಗೆ ಸರ್ವೆ ನಂ.151/2 ರ record of rights ನ ಪ್ರತಿಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದು, ಸದರಿ ದಾಖಲೆಯು ಪ್ರತಿಯಾಗಿರುವುದರಿಂದ ಅದನ್ನು ದೃಡೀಕೃತ ನಕಲನ್ನು ಹಾಜರುಪಡಿಸಲು ಸೂಚಿಸಿದ್ದು, ಅದನ್ನು ನಿ.ಪಿ.5 ಎಂದು ಗುರುತಿಸಲಾಯಿತು.

1922 ರಿಂದ ಇಲ್ಲಿಯವರೆಗೂ ವಾದಿಗಳು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1970 ರಿಂದ 2000 ಇಸವಿಯವರೆಗೆ ದಾವಾ ಸ್ವತ್ತಿನ ಆರ್.ಟಿ.ಸಿ.ಯು ಬಸಪ್ಪನವರ ಹೆಸರಿನಲ್ಲಿತ್ತು. ಈ ಸಂಬಂಧ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ಯಾಕನೂರು ಗ್ರಾಮದಲ್ಲಿ ಅಲ್ಲಿನ ಗ್ರಾಮಸ್ಥರನ್ನು ವಿಚಾರಿಸಿರುತ್ತೇನೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ನಾನು ವಿಚಾರಣೆ ಮಾಡಿರುವಿದಿಲ್ಲ ಎಂದರೆ ಸರಿಯಲ್ಲ. record of rights and index of land ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ದಾವಾ ಸ್ವತ್ತು ಬಸಪ್ಪನವರಿಗೆ ಸೇರಿರುವುದಿಲ್ಲ ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತು ಮೂಲತಃ ವಾದಿಗೆ ಸೇರಿದ್ದು ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿ.ಡಿ.7 ನ್ನು ಮಲ್ಲಪ್ಪ ಎನ್ನುವವರು ತಯಾರಿಸಿರುತ್ತಾರೆ. ಸದರಿ ದಾಖಲೆಯಲ್ಲಿ ದಾವಾ ಸ್ವತ್ತು ಮೂಲತಃ ಯಾರಿಗೆ ಸೇರಿತ್ತು ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಗಳ ನಿಜವಾದ ಹೆಸರು ಮಲ್ಲಿಕಾರ್ಜುನಸ್ವಾಮಿ ಮತ್ತು ಶಿವನಾಗಮ್ಮ ಎಂದರೆ ಸಾಕ್ಷಿಯು ಅವರುಗಳನ್ನು ಬಸಪ್ಪ ಮತ್ತು ನಾಗಮ್ಮ ಎಂತಲೂ ಕರೆಯುತ್ತಾರೆ ಎಂದು ನುಡಿದಿರುತ್ತಾರೆ. ಈ ಸಂಬಂಧ ದಾಖಲೆಗಳನ್ನು ನೋಡಿರುತ್ತೇನೆ ಆದರೆ ಹಾಜರುಪಡಿಸಿರುವುದಿಲ್ಲ. 4 ಮತ್ತು 5 ನೇ ಪ್ರತಿವಾದಿಗಳು ಹಾಗೂ ಬಸಪ್ಪ ಮತ್ತು ನಾಗಮ್ಮ ಬೇರೆ ಬೇರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಬಸಪ್ಪ ಮತ್ತು ನಾಗಮ್ಮನವರಿಂದ ಖರೀದಿ ಮಾಡಿರುತ್ತೇನೆ. 4 ಮತ್ತು 5 ನೇ ಪ್ರತಿವಾದಿಗಳು ಹಾಗೂ ಬಸಪ್ಪ ಮತ್ತು ನಾಗಮ್ಮನವರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳು ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳು ಹಾಗೂ ನಿ.ಡಿ.7 ರಲ್ಲಿರುವ ಸಾಕ್ಷಿದಾರರುಗಳು ಹಾಗೂ ನಾನು ಸೇರಿ ನಿ.ಡಿ.7 ನ್ನು ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಗಳು ಹಾಗೂ ಬಸಪ್ಪ ಮತ್ತು ನಾಗಮ್ಮ ಇಬ್ಬರು ಒಬ್ಬರೇ ಎಂದು ನಿ.ಡಿ.7 ರಲ್ಲಿ ನಮೂದು ಆಗಿರುವುದಿಲ್ಲ.

ಈ ದಾವೆಯನ್ನು ಸಲ್ಲಿಸುವ ಮೊದಲೇ ನಾಗಮ್ಮ ಮತ್ತು ಬಸಪ್ಪ ತೀರಿಕೊಂಡಿದ್ದರು ಎಂದರೆ ಸಾಕ್ಷಿಯ ಅವರು ಬದುಕಿರುತ್ತಾರೆ ಎಂದು ನುಡಿದಿರುತ್ತಾರೆ. ನಿ.ಡಿ.7 ನ್ನು ಬರೆಸಿಕೊಳ್ಳುವಾಗ ಸದರಿಯವರು ಬದುಕಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ 4 ಮತ್ತು 5 ನೇ ಪ್ರತಿವಾದಿಗಳನ್ನೇ ಬಸಪ್ಪ ಮತ್ತು ನಾಗಮ್ಮ ಎಂದು ಬಿಂಬಿಸಿ ನಿ.ಡಿ.7 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ.7 ದಾಖಲು ಆದ ಮೇಲೆ ವಾದಿಯು 4 ಮತ್ತು 5 ನೇ ಪ್ರತಿವಾದಿಗಳು ಹಾಗೂ ಬಸಪ್ಪ ಮತ್ತು ನಾಗಮ್ಮ ಹಾಗೂ ಸಾಕ್ಷಿದಾರರುಗಳ ವಿರುದ್ಧ ಹಾಗೂ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು 2011 ರಲ್ಲಿ ದಾಖಲು ಮಾಡಿದ್ದರು ಎಂದರೆ ಸರಿ. ನಿ.ಡಿ.7 ಆದ ಮೇಲೆ ವಾದಿಯು ನನ್ನನ್ನು ಸಂಪರ್ಕ ಮಾಡಿದ್ದರು ಎಂದರೆ ಸರಿಯಲ್ಲ. ಆಗ ನಾನು ವಾದಿಯ ಮಾಲೀಕತ್ವವನ್ನು ನಿರಾಕರಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.7 ಆದ ಮೇಲೆ ನಾನು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಕಾನೂನಿನ ಪ್ರಕಾರ ನನಗೆ ಮಾಲೀಕತ್ವದ ಹಕ್ಕು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.7 ರ ಸೃಷ್ಟಿತ ದಾಖಲೆಯ ಮೇಲೆ ವಾದಿಗಳಿಗೆ ನಾನು ತೊಂದರೆ ಕೊಡುತ್ತಿದ್ದೇನೆಂದರೆ

ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡದ ಕಾರಣ ನಾನು bonafide purchaser ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಸ್ವತ್ತಿನ ಮೇಲೆ ನನಗೆ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**